ಅಧ್ಯಕ್ಷರು.—ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

೧೦-೦೦ ಎ. ಎಂ.

ಗಮನ ಸೆಳೆಯುವ ಸೂಚನೆ

ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಹರಡಿರುವ ಕರುಳು ಬೇನೆಯಿಂದ ಉದ್ಭವಿಸಿದ ಪರಿಣಾಮಗಳ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ಗುಲಬರ್ಗಾ ಜಿಲ್ಲೆಯ ಚಿಂಚೋಳಿ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಕರುಳು ಬೇನೆಯಿಂದ ಉದ್ಭವಿಸಿರುವ ಪರಿಣಾಮಗಳ ಬಗ್ಗೆ ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿ ಅಬ್ಕಾರಿ ಸಚಿವರು).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ ಈ ಕೆಳಗಿನ ಲಿಖಿತ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಕಲ್ಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿ ದಿನಾಂಕ ೧೫-೨-೧೯೮೭ ರಿಂದ ಅತಿಸಾರ ರೋಗದ ೨೧ ಪ್ರಕರಣಗಳು ಮತ್ತು ೩ ಮರಣಗಳು ಸಂಭವಿಸಿದೆಯೆಂದು ವರದಿ ಆಗಿದೆ ಯಾದಗಿರಿ ತಾಲ್ಲೂಕಿನಲ್ಲಿ ಈ ವರ್ಷದ ಆರಂಭದಲ್ಲಿ ಅಂದರೆ ದಿನಾಂಕ ೧-೧-೧೯೮೭ ರಿಂದ ಸುಮಾರು ೬೧ ಪ್ರಕರಣಗಳು ಅತಿಸಾರ ರೋಗ ಆಗಿದ್ದು ಮರಣಗಳು ಯಾವುವು ಸಂಭವಿಸಿಲ್ಲವೆಂದು ವರದಿಯಾಗಿದೆ. ಆದರೆ ದಿನಾಂಕ ೨೮-೨-೧೯೮೭ ರಿಂದ ಇಂತಹ ಪ್ರಕರಗಳು ಈ ತಾಲ್ಲೂಕಿನಲ್ಲಿ ವರದಿಯಾಗಲಿಲ್ಲ. ಮುಂಜಾಗ್ರತೆಯಾಗಿ ಯಾದಗಿರಿ ತಾಲ್ಲೂಕಿನಲ್ಲಿ ಸುಮಾರು ೨೫,೪೨೬ ಜನರಿಗೆ ಕಾಲರಾ ಚುಚ್ಚ್ಮು ಮದ್ದು ಕೊಡಲಾಗಿದೆ. ಚಿಂಚೋಳಿ ತಾಲ್ಲೂಕಿನಲ್ಲಿ ೨೧೧೧ ಜನರಿಗೆ ಕಾಲರ ಚುಚ್ಚ್ಮು ಮದ್ದನ್ನು ಈ, ತಾಲ್ಲೂಕಿನ ಚಿಂಚೋಳಿ ಗಂಗವಳ್ಳಿ, ಕುಂಚಾವರ, ಪತ್ತೆಪುರ, ಹುಡದಳ್ಳಿ, ಕಾನಾಪುರಗಳಲ್ಲಿ ಕೊಡಲಾಗಿದೆ ಇದೂ ಅಲ್ಲದೆ ಮುಂಜಾಗ್ರತೆ ಕ್ರಮವಾಗಿ ಚಿತ್ತಾಪುರ ತಾಲ್ಲೂಕಿನಲ್ಲಿ ಮಂತ್ರ ಗುಲ್ಬರ್ಗಾ ತಾಲ್ಲೂಕಿನಲ್ಲಿ ಕುಡಿಯುವ ಭಾವಿಗಳಿಗೆ ಬ್ಲೀಚಿಂಗ್ ಪೌಡರ್ ಸಿಂಪಡಿಸಲಾಗಿದೆ. ಹಾಗೂ ಕಾಲರಾ ಚುಚ್ಚ್ಮು ಮದ್ದು ಕೂಡ ಕೊಡಲಾಗಿದೆ.

ಕಲ್ಬುರ್ಗಿ ಜಿಲ್ಲಾ ಆಸ್ಪತ್ರೆಯಲ್ಲಿ ನೀರಿನ ಅಭಾವದಿಂದ ಲವಣ ದ್ರವಗಳ ತಯಾರಿಕೆ ಸ್ವಲ್ಪ ವಂಟ್ಟಿಗೆ ಸ್ಥಗಿತಗೊಳಿಸಲಾಗಿದೆ ಎಂದು ವರದಿಯಾಗಿದೆ. ಆದರೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿ ಲವಣ ದ್ರವಗಳ ತಯಾರಿಕೆಯನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಸೂಚನೆ ನೀಡಲಾಗಿದೆ. ಈಗ ಬೀದರ್ ಜಿಲ್ಲೆ ಆಸ್ಪತ್ರೆಯಿಂದ ತಕ್ಷಣ ಈ ಲವಣ ದ್ರವಗಳನ್ನು ಚಿಂಚೋಳಿ ಮತ್ತು ಯಾದಗಿರಿ ತಾಲ್ಲೂಕುಗಳಿಗೆ ಸರಬರಾಜು ಮಾಡಿ ಚಿಕಿತ್ಸೆ ಕೊಡಬೇಕೆಂದು ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಹಾಗೂ ಜಂಟಿ ನಿರ್ದೇಶಕರು, ಗುಲ್ಬರ್ಗಾ ಅವರಿಗೆ ಸೂಚಿಸಲಾಗಿದೆ. ಇತ್ತೀಚಿನ ವರದಿಗಳ ಪ್ರಕಾರ ಚಿಂಚೋಳಿ ತಾಲ್ಲೂಕಿನಲ್ಲಿ ಅತಿಸಾರ ರೋಗಕ್ಕೆ ಒಳಗಾದ ಪ್ರಕರಣಗಳು ಇಲ್ಲವೆಂದು ವರದಿಯಾಗಿದೆ.

ಅಧ್ಯಕ್ಷರೇ, ಇದರ ಜೊತೆಗೆ ಇಪತ್ತಿನ ಬೆಳಿಗ್ಗೆ ನಾನು ತರಿಸಿರತಕ್ಕಂಥ ಸುದ್ದಿಯ ಪ್ರಕಾರ ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟು ಮೇಲ್ಕಂಡ ತಾಲ್ಲೂಕುಗಳಲ್ಲಿ ೧೬ ಹಳ್ಳಿಗಳಲ್ಲಿ ಈ. ರೋಗ ತಗುಲಿದೆ. ೪೯ ಜನಕ್ಕೆ ಈ ರೋಗ ಅಂಟಿದ್ದು, ಇವರಲ್ಲಿ ಸತ್ತಿರತಕ್ಕಂಥವರ ಸಂಖ್ಯೆ ಮೂರು ಹಾಗೂ ಕೊನೆಯಲ್ಲಿ ಒಬ್ಬ ಒಟ್ಟು ೪ ಜನ ಸತ್ತಿದ್ದಾರೆ. ಈಗ ಬೀದರ್ ಬಳ್ಳಾರಿ ಆಸ್ಪತ್ರೆಗಳಿಂದ ಅವಶ್ಯಕವಾದಂಥ ಎಲ್ಲಾ ಔಷಧಿಗಳನ್ನು ಕೂಡಾ ಕಳುಹಿಸಿ, ಈ ರೋಗ ಯಾವ ಭಾಗದಲ್ಲಿ ತಗುಲಿದೆ, ಅಲ್ಲಲ್ಲಿ ಮುಂಜಾಗರೂಕತಾ ಕ್ರಮವಾಗಿ ರೋಗ ಬಾರದ ಹಾಗೆ ವ್ಯವಸ್ಥೆ ಮಾಡಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಸುಮಾರು ೨೧ ಪ್ರಕರಣಗಳು ಚಿಂಚೋಳಿ ತಾಲ್ಲೂಕಿನಲ್ಲಿ ಸುಮಾರು ೬೧ ಪ್ರಕರಣಗಳು ಯಾದಗಿರಿ ತಾಲ್ಲೂಕಿನಲ್ಲಿ ಆಗಿವೆ. ಸುಮಾರು ೨೫,೪೨೬ ಜನರಿಗೆ ನೀವು ಈಗಾಗಲೇ ಇಂಜೆಕ್ಷನ್ ಕೊಡಿಸಿತಕ್ಕಂಥ

ವ್ಯವಸ್ಥೆಯನ್ನು ಸಹ ಮಾಡಿದ್ದೀರಿ. ಆದರೆ ಈ ರೋಗ ಇಡೀ ತಾಲ್ಲೂಕಿನಲ್ಲಿಯೇ ಹರಡಿದೆ. ಆದರೆ ಈ ಖಾಯಿಲೆ ಬಗ್ಗೆ ನಿಮ್ಮ ಇಲಾಖಾಧಿಕಾರಿಗಳು ಕೆಲವು ಸೆಲೆಕ್ಟೆಡ್ ಏರಿಯಾಗಳಲ್ಲಿ ಮಾತ್ರ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಹಳ್ಳಿಗಳಲ್ಲಿ ಡಾಕ್ಟರ್‌ಗಳೇ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಆಫ್ಜಲಪುರ ತಾಲ್ಲೂಕಿನಲ್ಲಿ ಸುಮಾರು ೨೦–೨೫ ಹಳ್ಳಿಗಳಲ್ಲಿ ಈ ರೋಗ ಹರಡಿದೆ. ಆದರೆ ಅಲ್ಲಿ ಯಾವ ಮುಂಜಾಗ್ರತಾ ಕ್ರಮವನ್ನು ಸಹ ನಿಮ್ಮ ಇಲಾಖಾಧಿಕಾರಿಗಳು ತೆಗೆದು ಕೊಂಡಿಲ್ಲವೆಂದು ವರದಿಗಳು ಬಂದಿವೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ರೋಗ ಹರಡದಂತೆ ತಡೆಗಟ್ಟಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಗುಲ್ಬರ್ಗಾ ಜಿಲ್ಲೆಗೆ ಸಾಕಷ್ಟು ಔಷಧಿಗಳನ್ನು ಒದಗಿಸಿಕೊಡಬೇಕು. ಅಲ್ಲಿಗೆ ಒಂದು ಮೊಬೈಲ್ ವ್ಯಾನ್ ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಯ್ಯಸ್ವಾಮಿ.––ಮಾನ್ಯ ಅಧ್ಯಕ್ಷರೇ, ಅಲ್ಲಿ ನನಗೆ ತಿಳಿದ ಪ್ರಕಾರ ಅಲ್ಲಿ ವಾಟರ್ ಕ್ಲೋರಿನೇಶನ್ ಆಗಿಲ್ಲ. ಅಲ್ಲಿನ ವಾಟರ್‌ನ್ನು ಪರೀಕ್ಷೆ ಮಾಡಿದಾಗ ಪಾಸಿಟೀವ್ ರಿಪೋರ್ಟ್ ಬಂದಿದೆ. ಆದ್ದರಿಂದ ಅಲ್ಲಿಗೆ ಕ್ಲೋರಿನ್ ಸಪ್ಲೈ ಮಾಡಬೇಕು. ಮಾನ್ಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆಯವರು ಹೇಳಿದ ಹಾಗೆ ಅಲ್ಲಿಗೆ ಒಂದು ಮೊಬೈಲ್ ವ್ಯಾನ್ ಅನ್ನು ಕಳುಹಿಸಿಕೊಟ್ಟು ಎಲ್ಲಾ ಕಡೆಗಳಲ್ಲಿ ಡಾಕ್ಟರ್‌ಗಳನ್ನು ಹಾಕಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಎಲ್ಲಾ ಜನರಿಗೂ ವ್ಯಾಕ್ಸಿನೇಶನ್ ಮಾಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.––ಮಾನ್ಯ ಅಧ್ಯಕ್ಷರೇ. ಸರ್ಕಾರದವರು ತೆಗೆದುಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ನಾನು ಈಗಾಗಲೇ ವಿವರಣೆಯನ್ನು ಕೊಟ್ಟಿದ್ದೇನೆ. ಮಂತ್ರ್ರಿ ಡಾಕ್ಟರ್‌ಗಳನ್ನು ಒದಗಿಸಿ ಕೊಡಬೇಕೆಂದು ಹೇಳಿದ್ದಾರೆ. ಎಲ್ಲರಿಗೂ ವ್ಯಾಕ್ಸಿನೇಶನ್ ಮಾಡಬೇಕೆಂದು ಹೇಳಿದ್ದಾರೆ, ಅಲ್ಲಿಗೆ ಮೊಬೈಲ್ ವ್ಯಾನ್ ಕಳುಹಿಸಿಕೊಡಬೇಕೆಂದು ಸಹ ಹೇಳಿದ್ದಾರೆ. ಖಂಡಿತವಾಗಿ ಈ ಕೆಲಸವನ್ನು ಮಾಡುತ್ತೇನೆ.

(ii) ಗಡಿ ವಿಭಾಗದಲ್ಲಿ ಕನ್ನಡ ಕಡ್ಡಾಯವಿದ್ದಿದನ್ನು ಹಿಂತೆಗೆದುಕೊಂಡ ವಿರುದ್ಧ ನಡೆಯುತ್ತಿರುವ ಧರಣಿ ಬಗ್ಗೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.––ಮಾನ್ಯ ಅಧ್ಯಕ್ಷರೇ, ಗಡಿ ಭಾಗದಲ್ಲಿ ಕನ್ನಡ ಕಡ್ಡಾಯ ವಿದ್ದಿದನ್ನು ಹಿಂತೆಗೆದುಕೊಳ್ಳುವುದಾಗಿ ಸರ್ಕಾರದವರು ಹೇಳಿರುವ ಬಗ್ಗೆ ಮುಖ್ಯಮಂತ್ರಿಗಳ ಗಮನ ವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ ––ಸಂಯುಕ್ತ ಮಹಾರಾಷ್ಟ್ರ ಸಮಿತಿಯು ಬೆಳಗಾವಿ ಯಲ್ಲಿ ಮತ್ತು ಮಹಾರಾಷ್ಟ್ರಕ್ಕೆ ಹೊಂದಿದ ಇತರ ಗಡಿ ಭಾಗಗಳಲ್ಲಿ ನಡೆಸಿದ ಚಳುವಳಿಯಿಂದಾಗಿ ಆ ಭಾಗಗಳಲ್ಲಿ ಹಿಂಸಾಕೃತ್ಯಗಳು ನಡೆದವಲ್ಲದೇ ಅನೇಕ ಜನ ನಿರಪರಾಧಿಗಳು ಪ್ರಾಣನೀಗಿದರು, ಮಂತ್ತು ಸರಕಾರದ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹೆಚ್ಚಿನ ನಷ್ಟವುಂಟಾಯಿತು. ಈ ಹಿನ್ನೆಲೆಯಲ್ಲಿ, ದಿನಾಂಕ ೧೧–೬–೧೯೫೬ರಂದು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳು ಸಭೆ ಸೇರಿ ಎರಡೂ ಪ್ರದೇಶಗಳಲ್ಲಿನ ಭಾಷಾ ಅಲ್ಪ ಸಂಖ್ಯಾಂತರ ಸಮಸ್ಯೆಗಳನ್ನು ಸಹಾನುಭೂತಿ ಮತ್ತು ಸೌಹಾರ್ದ ಮನೋಭಾವನೆಯಿಂದ ಚರ್ಚಿಸುವುದರ ಮೂಲಕ ಬಗೆಹರಿಸಬೇಕೆಂದು ನಿರ್ಧರಿಸಿದರು ಮತ್ತು ಈ ದಿಶೆಯಲ್ಲಿ ಭಾಷಾ ಅಲ್ಪ ಸಂಖ್ಯಾತರ ತೊಂದರೆಗಳನ್ನು ನಿವಾರಿಸಲು ಉಭಯ ರಾಜ್ಯಗಳ ಹಿರಿಯ ಅಧಿಕಾರಿಗಳ ಜಂಟಿ ಸಮಿತಿಯನ್ನು ರಚಿಸುವುದೆಂದು ನಿರ್ಣಯಿಸಲಾಯಿತ್ತು. ಈ ಸಮಿತಿಯು ಈಗಾಗಲೇ ರಚಿತವಾಗಿದ್ದು ಕಾರ್ಯಾರಂಭ ಮಾಡಿದೆ. ಇದೊಂದು ಸ್ಥಾಯೀ ಸಮಿತಿಯಾಗಿದ್ದು, ಪ್ರತಿ ೬ ತಿಂಗಳಿಗೊಮ್ಮೆ ಗಡಿ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ ಜನರ ತೊಂದರೆಗಳನ್ನು ನಿವಾರಿಸಲು ಕ್ರಮ ಗಳನ್ನು ಸೂಚಿಸುವುದು. ರಾಜ್ಯ ಸರಕಾರಗಳು ಜಂಟಿ ಸಮಿತಿಯ ಸರ್ವಸಮ್ಮತ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲು ಯತ್ನಿಸುವುವು.

ದಿನಾಂಕ ೫–೯–೧೯೬೬ರಂದು, ಉಭಯ ರಾಜ್ಯಗಳ ಮುಖ್ಯ ಮಂತ್ರಿಗಳು ಮುಂಬಯಿಯಲ್ಲಿ ಭೇಟಿಯಾಗಿ ಸೌಹಾರ್ದಯುತವಾಗಿ ಮಾತುಕತೆ ನಡೆಸಿದರು. ಆ ಸಮಯದಲ್ಲಿ ಮಹಾರಾಷ್ಟ್ರ ಸರಕಾರವು ಗಡಿ ಪ್ರದೇಶಗಳಲ್ಲಿನ ಕನ್ನಡ ಶಾಲೆಗಳಲ್ಲಿ ಎಂಟನೆಯ ತರಗತಿಯವರೆಗೆ ಮಾತ್ರವೇ ಭಾಷೆ